ಹುಡ್ಕೋ ಮನೆಗಳಿಗೆ ಹಣ ಬಿಡುಗಡೆ

೬೧೫. ಶ್ರೀ ಕೆ. ಕುಶಾಲ (ಸುಳ್ಯ).—ಮಾನ್ಯ ವಸತಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ೧೯೮೫–೮೬ ೧೯೮೬–೮೭, ೮೭–೮೮ನೇ ಸಾಲುಗಳಿಗೆ ಮಂಜೂರು ಆದ ಹುಡ್ಕೋ ಮನೆಗಳಿಗೆ ಸರ್ಕಾರದಿಂದ ಬಿಡುಗಡೆ ಆದ ಹಣ ಎಷ್ಟು ಹಾಗೂ ಬಿಡಂಗಡೆ ಪ್ರತೀ ವರ್ಷಗಳಲ್ಲಿ ಬಾಕಿ ಇರುವ ಹಣವೆಷ್ಟು ಮತ್ತು ಬಾಕಿಯಾಗಲು ಕಾರಣವೇನು.

ಆ) ಸುಳ್ಯ ತಾಲ್ಲೂಕಿನಲ್ಲಿ ಕಳೆದ ಮೂರು ವರ್ಷಗಳಿಂದ ಹುಡ್ಕೋ ಮನೆಗಳಿಗೆ ಹಣ ಪಾವತಿಸಲು ಬಾಕಿ ಇರುವ ಕುಳವಾರಂಗಳ ಸಂಖ್ಯೆ ಎಷ್ಟು ? ಬಾಕಿದಾರರಿಗೆ ಹಣ ಪಾವತಿಸಲು ಸೂಕ್ತ ಕ್ರಮ ಕೈಗೊಳ್ಳಲಾಗುವುದೇ ?

ಶ್ರೀ ಮೊಹಮ್ಮದ್ ಮೊಯಿನುದ್ದೀನ್ (ವಸತಿ ರಾಜ್ಯ ಸಚಿವರು).—

ಅ) ಹುಡ್ಕೋ ಮನೆಗಳಿಗೆ ಬಿಡುಗಡೆಯಾದ ಹಣ (ಲಕ್ಷ ರೂ.ಗಳಲ್ಲಿ)

೧೯೮೫–೮೬	೭೧.೮೦
೧೯೮೬–೮೭	೧೬.೧೦
೧೯೮೭–೮೮	೨೨.೪೧

ಬಿಡುಗಡೆ ಆಗಬೇಕಾಗುವ ಹಣ

೧೯೮೫–೮೬	೫೨.೪೦
೧೯೮೬–೮೭	೧೮೫.೨೨
೧೯೮೭–೮೮	೧೨೮.೨೯

ಹುಡ್ಕೋ ಸಂಸ್ಥೆಯು ಸಾಲದ ನಿರೀಕ್ಷೆಯಿಂದ ೧೯೮೬–೮೭ನೇ ಸಾಲಿನ ಸಹಾಯಧನವನ್ನು ಹಿಂದಿನ ವರ್ಷಗಳ ಸಾಲದ ಬದಲಾಗಿ ಮುಂಚಿತವೇ ಬಿಡುಗಡೆ ಮಾಡಲಾಯಿತು. ಅದೂ ಅಲ್ಲದೆ ಹುಡ್ಕೋ ಸಂಸ್ಥೆಯು ಎಲ್ಲಾ ಸಾಲವು ಕಂತುಗಳಲ್ಲಿ ಪಡೆಯಲಾದ್ದರಿಂದ ಸಹಾಯಧನವನ್ನು ಬಿಡಂಗಡೆ ಮಾಡಲು ವಿಳಂಬವಾಯಿತು.

ಆ) ಕುಳವಾರು ಸಂಖ್ಯೆ ೪೦ ಕ್ರಮಕ್ಕೆ ಗೊಳ್ಳಲಾಗುವುದು.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಎ. ಲಕ್ಷ್ಮೀಸಾಗರ್ (ಮಾನ್ಯ ಕಾನೂನು ಸಚಿವರು).—ಮಾನ್ಯ ಅಧ್ಯಕ್ಷರೇ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ಪಟ್ಟಿಯನ್ನು ಸಭೆಯ ಮುಂದಿಡಲಾಗಿದೆ.

ಅಧ್ಯಕ್ಷರು.—ಪಟ್ಟಿಯನ್ನು ಮುಂಡಿಸಲಾಗಿದೆ.

ಮೈಸೂರು ನಗರಕ್ಕೆ ಕಪಿಲ ನದಿಯಿಂದ ಕುಡಿಯುವ ನೀರಿನ ಯೋಜನೆ

೪೯೫. ಶ್ರೀ ಪಿ.ಎಂ. ಚಿಕ್ಕಬೋರಯ್ಯ (ಚಾಮರಾಜ).—ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಈ ಸಾರಿ ಮುಂಗಾರು ಮಳೆ ವಿಫಲವಾಗಿ ಕೃಷ್ಣರಾಜ ಸಾಗರದಲ್ಲಿ ನೀರಿನ ಸಂಗ್ರಹದ ಪ್ರಮಾಣ ಅತ್ಯಂತ ಕಡಿಮೆಯಾಗಿದ್ದು ನೀರಾವರಿಗೂ ಕುಡಿಯುವ ನೀರಿಗೂ ಉತ್ಕಟ ಅಭಾವ ಸ್ಥಿತಿ ಉಂಟಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ?

ಆ) ಹಾಗಿದ್ದಲ್ಲಿ ಜನ ಸಂರಕ್ಷಣೆ ದೃಷ್ಟಿಯಿಂದ ಯಾವ ಬಗೆಯ ಪರಿಹಾರ ಕಾರ್ಯಗಳನ್ನು ಕೂಡಲೇ ಕೈಗೊಳ್ಳಲು ಸರ್ಕಾರದವರು ಉದ್ದೇಶಿಸಿದ್ದಾರೆಯೆ ?